ಬರೋಲ್ಲ ಅಂತ ನೀನು ಈ ಜನ್ಮದಲ್ಲೇ ಒಪ್ಪೊಬ್ಯಾಡ. ಎಲ್ಲಾ ನೆವ ಬೇರೆಯವರ ಮೇಲೇನೇ ಎತ್ತಾಕಿ ನೀ ಚೊಕ್ಕ ಆಗ್ಬಿಡ್ತಿಯಲ್ಲ" ಎಂದು ಕ್ಯಾತೆ ತೆಗೆದ. ಇಂತಹ ಸಮಯದಲ್ಲಿ ಮಾತು ಬದಲಿಸಿ ಬಿಡುವ ಜಯಕ್ಕ, "ಮನೆ ವಾಸ್ತು ಸರಿಯಿಲ್ಲಾಂದ್ರೂ ಹಿಂಗೆ ಆಗುತ್ತಂತೆ ಕಂಡ್ರಿ. ಬೆಳಗ್ಗೆ ಟೀವಿಲಿ ಬರೋ ಸ್ವಾಮಿಗಳು ಹೇಳ್ತಿದ್ರು. ಈ ಮನೆ ಪಾಯ ತೆಗಿಯೋವಾಗ್ಲೆ ನಾ ಹೇಳ್ದೆ. ನನ್ ಮಾತೆಲ್ಲಿ ಕೇಳಿದೆ ನೀನು" ಎಂದು ದಬಾಯಿಸಿದರು. "ನೋಡೀಗ, ರೇಷನ್ ವಿಷಯ ಬಿಟ್ಟು ಮತ್ತೆ ಟೀವಿ ಕಡೆ ಹೊಂಟೆ. ನಡೀಕೆ ಈ ಮನೆ ವಾಸ್ತು ತಂದಿಟ್ಟೆ. ಯಾವನ್ದೊ ಮಾತ್ ಕೇಳಿ ಈಗ ಕಟ್ಸಿರೋ ಮನೆ ಬೇರೆ ಹೊಡಿಸಬೇಕಾ? ಬ್ಯಾಂಕ್ ಸಾಲ ನೀನು ಕಟ್ತಿಯೋ, ಆ ನಿಮ್ ವಾಸ್ತು ಸ್ವಾಮಿ ಕಟ್ತಾನೋ? ದ್ವಾಸೆ ಹಾಳಾಗಿದ್ದು ವಿಷಯ ಬಿಟ್ಟು ಬೇರೆ ಮಾತಾಡೋದು, ಮಾತಿಗೆ ಮಾತು ಮರೆಸೋದು ಯಾರರ ನಿನ್ನಿಂದ ಕಲೀಬೇಕು ಕಣೆ" ಎಂದು ಗುಡ್ಡಪ್ಪ ರಾಂಗಾದ.

"ಓಹೋ! ಬೆಳಗ್ಗೆ ಪೂಜೆ ಟೈಮಲ್ಲಿ ಹೂವಿನ ತಟ್ಟೆ

